ಇಲಾಖೆಯಲ್ಲಿನ ಕೆಲವರನ್ನು ಆರಿಸಿ ತಾಂತ್ರಿಕ ಸಲಹೆ ಕೊಡಲು ಇಡುವುದು ಒಳ್ಳೆಯ ದಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ — ಮಾನ್ಯ ಸದಸ್ಯರು ಮೂಲ ಪ್ರಶ್ನೆಯಲ್ಲಿ ಕೇಳಿರುವಂಥ ರೀತಿಯಲ್ಲಿ ಟೆಕ್ನಿಕಲ್ ಸೆಲ್ ಆವಶ್ಯಕವಿಲ್ಲ. ಎಲ್ಲೆಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ತಾಂತ್ರಿಕ ತಜ್ಞರ ಸಲಹೆ ಬೇಕೋ ಆಯಾ ಕಾಲದಲ್ಲಿ ಅಂಥ ತಾಂತ್ರಿಕ ಸಲಹೆಯನ್ನು ಪಡೆದೇ ತೀರ್ಮಾನಗಳನ್ನು ನಾವು ಮಾಡತಕ್ಕದ್ದು.

ಶ್ರೀ ಎಂ. ಎಸ್. ಕೃಷ್ಣನ್.— ಪಾರ್ಲಿಮೆಂಟಿನಲ್ಲಿ ಯಾವ ರೀತಿ ಒಂದೊಂದು ಮಿನಿಸ್ಟ್ರಿಗೂ ಕನ್ಸ್‌ಲ್ಟೇಟಿವ್ ಅಥವಾ ಅಡ್ವೈಸರಿ ಕಮಿಟಿಗಳನ್ನು ಅಲ್ಲಿನ ಕೆಲವು ನಾಯಕರನ್ನು ಸೇರಿಸಿ ಮಾಡಿದ್ದಾರೆ ಅದೇ ರೀತಿ ಇಲ್ಲಿಯೂ ಕೂಡ ಎಲ್ಲ ಮಿನಿಸ್ಟ್ರಿಗಳಿಗೂ ಸಲಹೆ ಮಾಡಲು ಕಮಿಟಿಗಳನ್ನು ಮಾಡುವಕ್ಕೆ ಯೋಜನೆ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಪ್ರಶ್ನೆ ಇರುವುದು ತಾಂತ್ರಿಕಜ್ಞರ ಸೆಲ್ ರಚನೆ ಮಾಡುವ ವಿಚಾರದಲ್ಲಿ. ಮಾನ್ಯ ಸದಸ್ಯರು ಕೇಳುತ್ತಿರುವುದು ಸಲಹಾ ಸಮಿತಿಗಳನ್ನು ಮಾಡುತ್ತೀರಾ ಎಂದು. ಇದಕ್ಕೂ ಅದಕ್ಕೂ ಸಂಬಂಧವಿಲ್ಲ.

NON-PAYMENT OF SALARY TO PEONS

471. Sri B. S. VEERABHADRAPPA (Kudligi).— Will the Minister for Education be pleased to state:—

(a) whether it has come to the notice of the Government that the salary of 34 peons who are working in all the school of Bellary District Local Boards which were taken over by the Government has not been paid for the last 3–4 years, since the date of their taking over ;

(b) if so, the action taken by the Government in this behalf ?

Sri A. R. BADARINARAYANA (Minister for Education).—

(a) Yes.

(b) The matter of payment of arrears of salary to these 34 persons is under the active concideration of the Government.

ಶ್ರೀ ಬಿ. ಎಸ್. ವೀರಭದ್ರಪ್ಪ.— ಈ ಜಿಳ ನೌಕರರ ಸಂಬಳವನ್ನು ಎಷ್ಟು ದಿವಸಗಳಲ್ಲಿ ಕೊಡುವ ಪ್ರಯತ್ನ ಮಾಡುತ್ತಾರೆ?

† ಶ್ರೀ ಎ. ಆರ್. ಬದರೀನಾರಾಯಣ — ಈ ವಿಚಾರ ಸರಕಾರದ ಮುಂದೆ ಬಂದಿದ್ದು ಹಣಕಾಸು ಇಲಾಖೆಯವರಿಂದ ಕೊಡುವದಕ್ಕಾಗುವದಿಲ್ಲವೆನ್ನುವ ತೀರ್ಮಾ

ನವಾಗಿತ್ತು. ಪುನ: ಈ ಬಗ್ಗೆ ಮನವಿ ಬಂದಮೇಲೆ ಅದನ್ನು ಪರಿಶೀಲನೆ ಮಾಡ ಬೇಕೆಂದು ಕಳುಹಿಸಿದ್ದೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಎಷ್ಟು ಸಮಯದಲ್ಲಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತಾರೆ?

ಶ್ರೀ ಎ. ಆರ್. ಬದರೀನಾರಾಯಣ.— ಫೈನಾನ್ಸಿಯಲ್ ಫೀಸಿಬಿಲಿಟಿ ನೋಡಿಕೊಂಡು ಅವರಿಗೆ ಹಳೇ ಸಂಬಳ ಕೊಡಿಸಿಕೊಡುವ ವಿಚಾರವನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಅವರಿಗೆ ಇಲ್ಲಿಯವರೆಗೂ ಸಂಬಳವನ್ನೇ ಕೊಟ್ಟಿಲ್ಲ. ಈಗಿನಿಂದಲಾದರೂ ಸಂಬಳ ಕೊಳುವುದಕ್ಕೆ ಪರಿಶೀಲನೆ ಮಾಡು ತ್ತಾರೆಯೇ?

ಶ್ರೀ ಎ ಆರ್. ಬದರೀನಾರಾಯಣ.—ಆ ಶಾಲೆಗಳನ್ನು ಸರ್ಕಾರ ವಹಿಸಿ ಕೊಂಡಾಗ ಅವರು ಸರ್ಕಾರಿ ನೌಕರರು ಎಂದು ಸರ್ಕಾರಕ್ಕೆ ಬಂದಿಲ್ಲ. ಅವರಿಗೆ ಕಂಟಿನ್‌ಜೆನ್ಸಿಯಿಂದ ಸಂಬಳವನ್ನು ಕೊಡುತ್ತ ಟೆಂಪೋರರಿ ನೌಕರರಾಗಿ ಇಟ್ಟು ಕೊಂಡಿದ್ದರು.

ಶ್ರೀ ಬಿ. ಎಸ್. ವೀರಭದ್ರಪ್ಪ.—ಅವರನ್ನು ಅದೇ ರೀತಿ ಮುಂದುವರಿಸಿ ಕೊಂಡು ಹೋಗುತ್ತಾರೆಯೇ ಹೇಗೆ?

ಶ್ರೀ ಎ. ಆರ್. ಬದರೀನಾರಾಯಣ.—ಒಂದು ಸಲ ಆಗುವದಿಲ್ಲವೆಂದು ತೀರ್ಮಾನವಾಗಿದೆ. ಪುನ: ಪರಿಶೀಲನೆ ಮಾಡುತ್ತಿದ್ದೇವೆಂದು ತಿಳಿಸಿದೆ.

ಶ್ರೀ ಶರಣಪ್ಪ —ಹಣಕಾಸು ಇಲಾಖೆಯವರು ಯಾವ ಆಧಾರದ ಮೇಲೆ ಕೊಡುವದಕ್ಕೆ ಆಗುವದಿಲ್ಲವೆಂದು ಹೇಳಿದರು? ಅದಕ್ಕೆ ಕಾರಣವೇನು?

ಶ್ರೀ ಎ. ಆರ್. ಬದರೀನಾರಾಯಣ —ಅವರಿಗೆ ತಿಂಗಳ ಸಂಬಳ ನಿಗದಿಯಾಗಿ ರಲಿಲ್ಲ. ಒಂದು ಮಗುವನ್ನು ಕರೆದುಕೊಂಡು ಬಂದರೆ ಇಷ್ಟು ಕೊಡಬೇಕು ಎಂದು ನಿಗದಿ ಮಾಡಿ ಕಾಂಟ್ರಾಕ್ಟ ಬೇಸಿಸ್ ಮೇಲೆ ಹಿಂದೆ ಕೊಡುತ್ತಿದ್ದರು.

ಶ್ರೀ ಕೆ. ಮಾದೇಗೌಡ —ಪ್ರೌಢ ಶಾಲೆಗಳಿಗೆ ೭೫ ಪರ್ಸೆಂಟ ಗ್ರಾಂಟಾಗಿ ಕೊಡತಕ್ಕ ಕಾಲದಲ್ಲಿ ಇದನ್ನೆಲ್ಲ ಪರಿಶೀಲನೆ ಮಾಡಿತ್ತೇ ಹೇಗೆ?

ಶ್ರೀ ಎ ಆರ್. ಬದರೀನಾರಾಯಣ.—ಆ ಶಾಲೆಗಳನ್ನು ಸರ್ಕಾರಕ್ಕೆ ವಹಿಸಿ ಕೊಟ್ಟಾಗ ಸರ್ಕಾರಿ ನೌಕರರ ಪಟ್ಟಿಯಲ್ಲಿ ಇವರ ಹೆಸರುಗಳನ್ನು ಕಳುಹಿಸಿರಲಿಲ್ಲ. ಆ ಮೇಲೆ ಬೇರೆಯಾಗಿ ಕಳುಹಿಸಿದ್ದು ಟೆಂಪೊರರಿ ಎಸ್ಟಾಬ್ಲಿಷ್‌ಮೆಂಟ ಎನ್ನುವ ರೀತಿ ಯಲ್ಲಿ ಪರಿಗಣಿಸಿದ್ದರಿಂದ ಸರ್ಕಾರ ವಿಮರ್ಶೆ ಮಾಡಿ ಕೊಡುವದಕ್ಕಾಗುವದಿಲ್ಲ ಎನ್ನುವ ತೀರ್ಮಾನಕ್ಕೆ ಬಂತು. ಪುನ: ಮನವಿ ಬಂದಿದ್ದು ಅದನ್ನು ವಿಮರ್ಶೆ ಮಾಡುತ್ತಿದ್ದೇವೆ.

ಶ್ರೀ ಕೆ ಮಾದೇಗೌಡ.—ನೌಕರರ ಸಂಬಳ ಸಾರಿಗೆಗಳಿಗಾಗಿ ಲಂಚ ಪರ್ಸೆಂಟ್ ಸರ್ಕಾರದಿಂದ ಕೊಡುತ್ತಿಲ್ಲಿವೇ?

ಶ್ರೀ ಎ. ಆರ್. ಬದರೀನಾರಾಯಣ —ಪ್ರೌಢ ಶಾಲೆಗಳ ಉಪಾಧ್ಯಾಯರಿಗೆ ಸಂಬಳವನ್ನು ಪೂರ್ತಿಯಾಗಿ ಸರ್ಕಾರದಿಂದಲೇ ಕೊಡುತ್ತಿದ್ದೇವೆ.

SANCTION OF LOAN BY S. C. HOUSE BUILDING CO-OPERATIVE SOCIETIES IN TIPTUR TALUK

228. Sri T. M. MANJUNATH (Tiptur).— Will the Minister for Co-operative be pleased to state:—

(a) whether there are any Scheduled Caste House Building Co-operation Societies in Tiptur taluk ;

(b) if so, the number of share holders who have applied for loan from these Societies ;

(c) the amount of loan paid so far and the number of persons for whom loans have been granted ?

Sri A. SHANKARA ALVA (Minister for Co-operation).—

(a) Yes. There is only one Scheduled Caste and Scheduled Tribe House Building Co-operative Society in Tiptur taluk.

(b) 368.

(c) (i) Rs. 21,490.
(ii) 28 members.

ಈ ಪ್ರಶ್ನೆಗೆ (ಇ) ಗೆ ಕೊಟ್ಟಿರುವ ಉತ್ತರದಲ್ಲಿ ೨೧೪೯೦ ರೂಪಾಯಿಗಳು ಎಂದು ಇರುವದನ್ನು ೨೧೪೯೦ ರೂಪಾಯಿಗಳು ಎಂದು ತಿದ್ದುಪಡಿ ಮಾಡಿಕೊಳ್ಳಬೇಕು.

† ಶ್ರೀ ಟಿ. ಎಂ. ಮಂಜುನಾಥ.— ಸ್ವಾಮಿ ಈ ತಿಪಟೂರು ತಾಲ್ಲೂಕಿನಲ್ಲಿ ೨ ತಕ್ಕ ಹರಿಜನ ಗಿರಿಜನರ ಗೃಹನಿರ್ಮಾಣ ಸಂಘಕ್ಕೆ ಇದುವರೆಗೆ ೨೧೪೯೦ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈಗ ಈ ಹಣವನ್ನು ಅರ್ಜಿಹಾಕಿಕೊಂಡ ಪೇರ್‌ಹೋಲ್ಡರುಗಳಿಗೆ ಮನೆಗಳನ್ನು ಕಟ್ಟುವದಕ್ಕಾಗಿ ಮೊದಲನೆ ಕಂತನ್ನು ಕೊಟ್ಟಿದ್ದಾರೆ ಎಂದು ಕಾಣುತ್ತದೆ. ಅವರಿಗೆ ಎನೇ ಕಂತನ್ನು ಕೊಡದೇ ಇರುವದಕ್ಕೆ ಕಾರಣವೇನು ? ಈಗ ಫಸ್ಟ್ ಇನ್‌ಸ್ಟಾಲ್‌ಮೆಂಟ್ ತೆಗೆದುಕೊಂಡಿರುವವರು ಮನೆಗಳನ್ನು ಕಟ್ಟಿ ಎಷ್ಟು ವರ್ಷ ಆಯಿತು? ಅವರ ಗತಿ ಏನು?